**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.38/2024**

**CW - 4 PW-3**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಅಮರೇಶ |
| ತಂದೆ | ಃ | ಯಂಕಪ್ಪ |
| ವಯಸ್ಸು | ಃ | 38 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಮುಷ್ಠೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **12-02-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ಚಾಸಾ-1 ಮುಷ್ಠೂರು ಗ್ರಾಮದಿಂದ 1 ಕಿ.ಮೀ ಹಂತರದಲ್ಲಿ ಕುರಿ ಶೇಡನ್ನು ಹಾಕಿದ್ದು ಸದರಿ ಕುರಿ ಶೇಡನಿಂದ 11 ಟಗರು ಮರಿ, 10 ಹೋತುಮರಿಗಳನ್ನು ನಮ್ಮೂರಿನ ಇಬ್ಬರು ಅಂಜನೇಯ್ಯರು ಮತ್ತು ಓರ್ವ ಯಲ್ಲನಗೌಡ ಕಳ್ಳತನ ಮಾಡಿಕೊಂಡು ಹೋಗಿದ್ದು. ಸದರಿ 3 ಜನ ಆರೋಪಿತರನ್ನು ಗಬ್ಬೂರು ಠಾಣೆಯಲ್ಲಿ ದಿ.04-08-2023 ರಂದು ನೋಡಿರುತ್ತೇನೆ.

ಠಾಣೆಯಲ್ಲಿ ಪೊಲೀಸರು ವಾಹನವನ್ನು ತೊರಿಸಿ ಸದರಿ ವಾಹನದಲ್ಲಿ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಸ್ಥಳದಲ್ಲಿ 2 ಪೋಟೋಗಳನ್ನು ತೆಗೆದಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸದರಿ ಸಾಕ್ಷಿಯನ್ನು ಭಾಗಶ**:** ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.**)**

**<u>ಪಾಟೀ ಸವಾಲು:-</u> ಮಾನ್ಯ ಸ.ಸ.ಅ ರವರಿಂದ**

ದಿ.03-08-2023 ರಂದು ಪೊಲೀಸರು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಠಾಣೆಯಲ್ಲಿ ಪಂಚನಾಮೆ ಮಾಡಿ ಆರೋಪಿತರಿಂದ ರೂ.75,650/- ಹಣಮ ಮತ್ತು 1 ಗೂಡ್ಸ ಆಟೋವನ್ನು ಜಪ್ತಿ ಪಡಿಸಿಕೊಂಡು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಸಹಿ ಪಡೆದಿರುತ್ತಾರೆ ಅಂದರೆ ಸರಿ.

ದಿ. 18-07-2023 ರಂದು ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಸದರಿ ಹೇಳಿಕೆಯಲ್ಲಿ ನಮ್ಮೂರಿನ ಚನ್ನಬಸವ ತನ್ನ ಹೊಲದಲ್ಲಿ ಫಾರ್ಮ ಹೌಸ್ ಕಟ್ಟಿದ್ದು ಸದರಿ ಫಾರ್ಮ ಹೌಸನಲ್ಲಿ ಕೋಳಿ, ಟಗರು ಮತ್ತು ಹೋತುಮರಿಗಳನ್ನು ಸಾಕಾಣಿಕೆ ಮಾಡಿದ್ದು ಹಾಗೂ ನಮ್ಮೂರಿನ ದೇವೆಂದ್ರಪ್ಪನ 1 ಟಗರನ್ನು ಫಾರ್ಮ ಹೌಸನಲ್ಲಿ ಬಿಟ್ಟಿದ್ದು ಆತನು, ಹಗಲು ವೇಳೆಯಲ್ಲಿ ಕಾವಲು ಕಾಯುತ್ತಿದ್ದು ರಾತ್ರಿ ವೇಳೆಯಲ್ಲಿ ಗೆಜ್ಜೆಬಾವಿಯ ಹನುಮೇಶ ಕಾವಲು ಕಾಯುತ್ತಿದ್ದ. ಹನುಮೇಶನಿಗೆ

**CC No.38/2024**
**CW - 4 PW-3**

3-4 ದಿನಗಳಿಂದ ಅರಾಮ ಇಲ್ಲದ ಕಾರಣ ರಾತ್ರಿ ವೇಳೆ ಚನ್ನಬಸವ ಫಾರ್ಮ ಹೌಸಗೆ ಬಂದು ಮಲಗುತ್ತಿದ್ದು,

ದಿ.16-07-2023 ರಂದು ದೇವೆಂದ್ರಪ್ಪ ಫಾರ್ಮ ಹೌಸಗೆ ಹೋಗಲು ಬಂದು ರಾತ್ರಿ 7-00 ಗಂಟೆಗೆ ಮನೆಗೆ ಹೋಗಿದ್ದು ಚನ್ನಬಸವನ ಮಗನಿಗೆ ಅರಾಮ ಇಲ್ಲದ ಕಾರಣ ರಾತ್ರಿ ಫಾರ್ಮ ಹೌಸಗೆ ಯಾರು ಹೋಗಿರಲಿಲ್ಲ. ದಿ.17-07-2023 ರಂದು ಬೆಳಿಗ್ಗೆ 6-00 ಕ್ಕೆ ದೇವೆಂದ್ರಪ್ಪ ಫಾರ್ಮ ಹೌಸಗೆ ಹೋಗಿ ನೋಡಿಲಾಗಿ ಬೀಗ ಮುರಿದು ಯಾರೋ 11 ಟಗರು, 10 ಹೋತುಮರಿಗಳನ್ನು ಕಳುವು ಮಾಡಿಕೊಂಡು ಹೋಗಿರುವುದು ತಿಳಿದು ಬಂದಿದ್ದು, ಆಗ ನಾನು ಮತ್ತು ಚನ್ನಬಸವ ಫಾರ್ಮ ಹೌಸಗೆ ಹೋಗಿ ನೋಡಲಾಗಿ ಕಳುವಾದ ವಿಷಯ ನಿಜವಿರುತ್ತದೆ ಎಂದು ಹೇಳಿಕೆ ನೀಡಿರುತ್ತೇನೆ. ಹಾಗೂ

ದಿ.04-08-2023 ರಂದು ಪೊಲೀಸರು ನಮ್ಮನ್ನು ಠಾಣೆಗೆ ಕರೆಯಿಸಿ ತಮ್ಮ ವಶದಲ್ಲಿ ಇದ್ದ 3 ಆರೋಪಿತರನ್ನು ತೋರಿಸಿದ್ದು, ಸದರಿ ಆರೋಪಿತರು ಟಗರು ಮತ್ತು ಹೋತುಮರಿಗಳನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ ಎಂದು ತಿಳಿಸಿದ್ದು, ಸದರಿ ಯವರಿಂದ ಹಣ ಮತ್ತು ವಾಹನವನ್ನು ಅಮಾನತ್ತು ಪಡೆಸಿಕೊಂಡ ಬಗ್ಗೆ ನಾನು ಪೊಲೀಸರಿಗೆ ಪುರವಣಿ ಹೇಳಿಕೆ ನೀಡಿರುತ್ತೇನೆ. ಹಣ ಮತ್ತು ಆಟೋ ಜಪ್ತಿ ಪಂಚನಾಮೆಯನ್ನು ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು</u>:- ಆರೋಪಿ ಪರ ಶ್ರೀ. ಎಸ್.ಪಿ ವಕೀಲರಿಂದ.**

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಚಾಸಾ-1 ಚನ್ನಬಸವ ನನಗೆ ಸಂಬಂಧಿಕನಾಗುವುದಿಲ್ಲ. ಸ್ನೇಹಿತನಾಗಿರುತ್ತಾನೆ. ಸದರಿ ಚಾಸಾ-1 ರವರ ಫಾರ್ಮ ಹೌಸ ಆತನ ಹೋಲದಲ್ಲಿ ಇರುತ್ತದೆ. ಸದರಿ ಹೋಲದ ಸರ್ವೆ ನಂಬರ್ ಗೊತ್ತಿಲ್ಲ. ಸದರಿ ಫಾರ್ಮ ಹೌಸನಲ್ಲಿ ಎಷ್ಟು ಕೋಳಿ, ಕುರಿ ಮತ್ತು ಹೋತುಮರಿ ಇದ್ದವು ಎಂದು ನನಗೆ ಗೊತ್ತಿಲ್ಲ. ಫಾರ್ಮ ಹೌಸಗೆ ನನ್ನನ್ನು ಯಾರು ಕರೆದುಕೊಂಡು ಹೋಗಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಚಾಸಾ-1 ಪೋನ್ ಮಾಡಿದ್ದು, ನಾನೇ ಹೋಗಿರುತ್ತೇನೆ ಎಂದು ನುಡಿಯುತ್ತಾನೆ. ಯಾರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಅಂದರೆ ಸಾಕ್ಷಿ ಮೊದಲು ಗೊತ್ತಿರಲಿಲ್ಲ, ಪೊಲೀಸರು ಹೇಳಿದ ನಂತರ ಕಳ್ಳತನ ಮಾಡಿಕೊಂಡು ಹೋದವರ ಕುರಿತು ತಿಳಿದು ಬಂದಿರುತ್ತದೆ. ಪೊಲೀಸ ಠಾಣೆಗೆ ಚನ್ನಪ್ಪ ನನ್ನನ್ನು ಕರೆದುಕೊಂಡು ಹೋಗಿರುತ್ತಾನೆ. ದಿ.03-08-2023 ರಂದು ಠಾಣೆಗೆ ಹೋಗಿರುತ್ತೇವೆ. ಪೊಲೀಸರು ಠಾಣೆಯ ಬಳಿ ತೋರಿಸಿದ ವಾಹನದ ನಂಬರ್ ಗೊತ್ತಿಲ್ಲ. ಠಾಣೆಯಲ್ಲಿ ಪಂಚನಾಮೆ ಮಾಡಿ ಪೋಟೋ ತೆಗೆದಿರುತ್ತಾರೆ. ದಿ.03-08-2023 ರಂದು ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ. ನನ್ನಹೇಳಿಕೆಯಲ್ಲಿ ಬರೆದಿರುವ ಸಂಗತಿಗಳು

**CC No.38/2024**
CW - 4 PW-3

ಗೊತ್ತಿಲ್ಲ. ಪಂಚನಾಮೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿ ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. ಚಾಸಾ-1 ಸ್ನೇಹಿತನಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.